# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ : ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/G/G-426/2021**

**ಆದೇಶ ದಿನಾಂಕ : 29.07.2021**

ಶ್ರೀ ಮಹಮ್ಮದ್ ಸಾದಿಕ್,
ಸಾದಿಕ್ ಜುವೆಲರ್ಸ್,
ನೇತಾಜಿ ರೋಡ್,
ರಾಯಚೂರು–584101.

**ಪ್ರತಿನಿಧಿಸುವವರು:**
ಶ್ರೀ ಎಸ್. ಮಹೆಬೂಬ್,
ಮನೆ ಸಂಖ್ಯೆ: 13–2–2/195,
ಅರ್ಜುನಪ್ಪ ಕಾಲೋನಿ,
ಯೆರೆಮಾರಸ್ ಕ್ಯಾಂಪ್,
ರಾಯಚೂರು–584135. – ದೂರುದಾರರು/ಮೇಲ್ಮನವಿದಾರರು

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ–1, ಗುವಿಸಕಂನಿ,
ಡಿಸಿ ರೆಸಿಡೆನ್ಸಿ ಎದುರು ಮತ್ತು ಕೆಇಬಿ ಕಾಲೋನಿ ಎದುರು,
ರಾಯಚೂರು.

2. ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ, ಗುವಿಸಕಂನಿ,
ಬಸವೇಶ್ವರ ವೃತ್ತದ ಹತ್ತಿರ,
ಎಲ್.ಐ.ಸಿ ಕಛೇರಿ ಎದುರು,
ರಾಯಚೂರು–584101. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಕಲಂ 21.03ರ ಅಡಿಯಲ್ಲಿ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ರಾಯಚೂರು, ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/20-21/CYS-50, ಇವರ ದಿನಾಂಕ 16.03.2021, ಆದೇಶದ ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ ದೂರುದಾರ/ಗ್ರಾಹಕ ಶ್ರೀ ಮೋಹಮದ್ ಸಾದಿಕ್ ರವರ ಸಾದಿಕ್ ಜಿವೆಲರ್ಸ್, ನೇತಾಜಿ ರೋಡ್, ರಾಯಚೂರು ಇವರಿಗೆ ಸಂಬಂಧಿಸಿದ ಆರ್.ಆರ್. ಸಂಖ್ಯೆ 1287ಗೆ, ರೂ. 1,44,701/- ಮೊತ್ತವನ್ನು ನೋಟಿಸು ನೀಡದೇ ಡಿಸೆಂಬರ್ 2019ರ ಗ್ರಾಹಕರ ಬಿಲ್‌ನಲ್ಲಿ ಸೇರಿಸಿರುತ್ತಾರೆಂದು ದೂರುದಾರ/ಗ್ರಾಹಕ ದಿನಾಂಕ 26.12.2019 ರಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ-1, ಗುವಿಸಕಂನಿ, ರಾಯಚೂರು ಇವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ ಆ ಮೂಲಕ ಪರಿಷ್ಕೃತ ಬಿಲ್‌ನ್ನು ವಿತರಿಸಲು ಕೋರಿರುತ್ತಾರೆ ಎಂಬುದಾಗಿ ಕಂಡುಬರುತ್ತದೆ. ಈ ರೀತಿ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಯಾವುದೇ ಪ್ರಯೋಜನ ಉಂಟಾಗಿಲ್ಲವೆಂದು ಮತ್ತು ದೂರುದಾರ/ಗ್ರಾಹಕ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದ ಉಪ-ವಿಭಾಗೀಯ ಕಛೇರಿಯಿಂದ ಪ್ರಕರಣಕ್ಕೆ ಕುರಿತಂತೆ ಯಾವುದೇ ಮಾಹಿತಿ ಲಭ್ಯವಾಗದೇ ಹೋದಕಾರಣ ಗತ್ಯಂತರವಿಲ್ಲದೇ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ಅರ್ಜಿ ಸಲ್ಲಿಸಿದ್ದಾಗಿ ಕಂಡು ಬರುತ್ತದೆ.

2) ಎದುರುದಾರರು ಸದರಿ ಗ್ರಾಹಕ ವೇದಿಕೆಯ ಮುಂದೆ ಹಾಜರಾಗಿ ದೂರುದಾರರದು ಸಲ್ಲಿಸಿದ ಅರ್ಜಿಗೆ ತಮ್ಮ ಪ್ರತಿ ಹೇಳಿಕೆ ನೀಡುತ್ತಾ ಗ್ರಾಹಕರ ಸ್ಥಾವರಕ್ಕೆ ದಿನಾಂಕ 02.01.2016 ರಂದು ಶಾಶ್ವತ ವಿದ್ಯುತ್ ನಿಲುಗಡೆ ಆಗಿರುವುದನ್ನು ಟಿಕೆಟ್ ರೈಸ್

(Ticket raise) ಮಾಡಿ ದಿನಾಂಕ 20.09.2019ರಂದು ಪುನಃ ಮರುಚಾಲ್ತಿಗೊಳಿಸಲಾಗಿದೆಯೆಂದು, ಆದ್ದರಿಂದ ದಿನಾಂಕ 02.01.2016 ರಿಂದ 08.12.2019 ರವರೆಗೆ ಒಟ್ಟು 16700 ಯುನಿಟ್ ವಿದ್ಯುತ್ ಬಳಕೆಯಾಗಿದ್ದು ರೂ. 1,61,587/- ಬಿಲ್ ವಿತರಿಸಲಾಗಿದೆಯೆಂದು, ನಂತರ ದಿನಾಂಕ 08.12.2019ರಿಂದ 06.07.2020 ರವರೆಗೆ 1450 ಯುನಿಟ್ ರೂ. 14,466/- ಆಗಿದ್ದು ಒಟ್ಟು 36 ತಿಂಗಳಿನ ಬಿಲ್ ಮೊತ್ತವು 1,76,053/- ಬಾಕಿಯಿರುತ್ತದೆಂದು ನುಡಿದಿರುತ್ತಾರೆ, ಮತ್ತೆ ಮುಂದುವರೆದು ಗ್ರಾಹಕರ ಸ್ಥಾವರಕ್ಕೆ ಸ್ಲಾಬ್ ವೈಸ್ ಬೆನಿಫಿಟ್ (Slab wise benefit) ನೀಡಲಾಗಿದೆಯೆಂದು ಮತ್ತು ದಿನಾಂಕ 02.01.2016 ರಿಂದ ತಮ್ಮ ಸಿಸ್ಟಮ್‌ನಲ್ಲಿ ತಾಂತ್ರಿಕ ದೋಷ ಇದ್ದ ಕಾರಣ ಇನ್‌ಆಕ್ಟೀವ್ (Inactive) ಆಗಿದ್ದು, ಇದೇ ಕಾರಣಕ್ಕಾಗಿ ನಿಗಧಿತ ಸಮಯದಲ್ಲಿ ಗ್ರಾಹಕರಿಗೆ ಬಿಲ್ ನೀಡಲು ಸಾಧ್ಯ ಆಗಿರಲಿಲ್ಲವೆಂದು ಅದಕ್ಕಾಗಿ ದಿನಾಂಕ 20.09.2019ರಂದು ಮತ್ತೋಮ್ಮೆ ಟಿಕೆಟ್ ರೈಸ್ (Ticket raise) ಮಾಡಿ ಸಿಸ್ಟಮ್‌ನ್ನು ಆಕ್ಟಿವ್‌ಗೋಳಿಸಿ (Active) ಅದರಂತೆ ದಿನಾಂಕ 09.12.2019ರಂದು ಗ್ರಾಹಕರಿಗೆ ಬಿಲ್ ನೀಡಲಾಗಿದೆಯೆಂದು ನುಡಿದಿರುತ್ತಾರೆ ಮತ್ತೆ ಮುಂದುವರೆದು ಗ್ರಾಹಕರು ತಮ್ಮ ಸ್ಥಾವರಕ್ಕೆ ಬಿಲ್ ನೀಡದೆ ಇರುವ ಬಗ್ಗೆ 7 ದಿನಗಳ ಒಳಗಾಗಿ ಸಂಬಂಧಿಸಿದ ಕಛೇರಿಗೆ ತಿಳಿಸಬೇಕಾಗುತ್ತದೆ ಎಂದು ಹಾಗೂ ಸೆಲ್ಫ್ ರೀಡಿಂಗ್ (Self Reading) ಪಡೆದು ಬಿಲ್ಲನ್ನು ಪಾವತಿಸಬಹುದಾಗಿತ್ತೆಂದು ಆದರೆ ಆ ರೀತಿ ಗ್ರಾಹಕರು ಮಾಡಿಲ್ಲವೆಂದು ನುಡಿಯುತ್ತಾ ಈ ಎಲ್ಲಾ ಅಂಶಗಳ ಪ್ರಕಾರ ಸದರಿ ಸ್ಥಾವರಕ್ಕೆ ಸಂಬಂಧಪಟ್ಟಂತೆ ಬಿಲ್ ಹಣವನ್ನು ಸಂಪೂರ್ಣವಾಗಿ ಗ್ರಾಹಕರು ಪಾವತಿಸಬೇಕಾಗುತ್ತದೆಂದು ಆದ ಕಾರಣ ಗ್ರಾಹಕರ ದೂರನ್ನು ನಿರಾಕರಿಸಿ ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆಂದು ಕಂಡುಬರುತ್ತದೆ.

3) ಉಭಯಪರ ವಾದ ವಿವಾದಗಳನ್ನು ಆಲಿಸಿದನಂತರ ಗ್ರಾಹಕರ ಕುಂದು ಕೊರತೆಗಳ ನಿವಾರಣ ವೇದಿಕೆ, ರಾಯಚೂರು ರವರು ದಿನಾಂಕ 16.03.2021ರಂದು ಆದೇಶ ಹೊರಡಿಸುತ್ತಾ ಆ ಮೂಲಕ ಪರಿಷ್ಕೃತ ಬಿಲ್ ವಿತರಿಸಿ ಉಂಟಾದ ವಿಳಂಬಕ್ಕೆ ಸಮರ್ಥನೀಯ ಕಾರಣವನ್ನು ವೇದಿಕೆಗೆ ನೀಡುವಂತೆ ಪ್ರತಿವಾದಿಗೆ ಸೂಚಿಸಿರುತ್ತಾರೆ. ಹಾಗೂ ಅರ್ಜಿದಾರರಿಗೆ, ಸದರಿಯವರು ಉಪಯೋಗಿಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗಳಿಗೆ ಬಿಲ್ ಪಾವತಿಮಾಡುವಂತೆ ಆದೇಶಿಸಿರುತ್ತದೆ. ಸದರಿ ಆದೇಶದಿಂದ ನೊಂದ ಅಪೀಲುದಾರರರು/ದೂರುದಾರರು ಪ್ರಸ್ತುತ ಮೇಲ್ಮನವಿಯನ್ನು ಈ ಪ್ರಾಧಿಕಾರದ ಮುಂದೆ ಈ ಕೆಳಕಂಡ ಕಾರಣಗಳ ಅಡಿಯಲ್ಲಿ ಸಲ್ಲಿಸಿರುತ್ತಾರೆ.

> ಗ್ರಾಹಕರ ಕುಂದು ಕೊರತೆಗಳ ನಿವಾರಣ ವೇದಿಕೆ, ರಾಯಚೂರು ರವರು ಹೊರಡಿಸಿದ ಆದೇಶವು ಕಾನೂನು ಸಮ್ಮತವಾಗಿಲ್ಲವೆಂದೂ ಸರಿ ಇರುವುದಿಲ್ಲವೆಂದು ಹಾಗೂ ವೇದಿಕೆಯು ನ್ಯಾಯಬದ್ಧ ಆದೇಶವನ್ನು ಹೊರಡಿಸಿಲ್ಲವೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು Conditions of Supply of Electricity of Distributions Licensees in the State of Karnataka, Regulation 29.03 ಪ್ರಕಾರ ಮೇಲ್ಮನವಿದಾರರು ಗ್ರಾಹಕರಿಗೆ ಅಂತಿಮ ಆದೇಶವನ್ನು ಹೊರಡಿಸುವ ಮೊದಲು ಮಧ್ಯಂತರ ಅಸೆಸ್‌ಮೆಂಟ್ ಆದೇಶವನ್ನು ನೀಡಬೇಕಾಗಿರುತ್ತದೆಂದು, ಆದರೆ ಎದರುದಾರರು ಆ ರೀತಿ ಮದ್ಯಂತರ ಆದೇಶವನ್ನು ನೀಡಿಲ್ಲವೆಂದು, ಗ್ರಾಹಕರ ಗಮನಕ್ಕೆ ತಾರದೆಯೇ ಬಿಲ್‌ನಲ್ಲಿ ಹಿಂಬಾಕಿ ಮೊತ್ತವನ್ನು ಸೇರಿಸಿರುತ್ತಾರೆಂದು, ಅಷ್ಟೇ ಅಲ್ಲದೆ ಇದಕ್ಕೆ ಸಂಬಂಧಿಸಿದಂತೆ ಮಾಸಿಕ ವಾರು ವಿವರಣೆ ನೀಡಿಲ್ಲವೆಂದು ಈ ರೀತಿ ಎದುರುದಾರರು ಮಾಡಿರುವುದು ಕಾನೂನು ಸಮ್ಮತ ಆಗಿರುವುದಿಲ್ಲವೆಂದು, ಹಿಗಿದ್ದರೂ ಸಹಾ ಗ್ರಾಹಕರ ಕುಂದು ಕೊರತೆಗಳ ನಿವಾರಣ ವೇದಿಕೆ, ರಾಯಚೂರುರವರು ಈ ಅಂಶವನ್ನು ಪರಿಗಣಿಸಿಲ್ಲವೆಂದೂ, ಅಷ್ಟೇ ಅಲ್ಲದೇ ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತದೆಂದು ಈ ಎಲ್ಲಾ ಕಾರಣಗಳಿಂದ ತಾವು ಅಪೀಲನ್ನು ಸಲ್ಲಿಸಬೇಕಾಯಿತೆಂದು ಹಾಗೂ ತಮ್ಮ ಅಪೀಲನ್ನು ಪುರಸ್ಕರಿಸಿ ಗ್ರಾಹಕರ ಕುಂದು ಕೊರತೆಗಳ ನಿವಾರಣ ವೇದಿಕೆ, ರಾಯಚೂರುರವರು ಮಾಡಿದ ಆದೇಶವನ್ನು ತೆರವುಗೊಳಿಸಿ ಆದೇಶ ನೀಡಬೇಕೆಂದು ಕೋರಿರುತ್ತಾರೆ.

4) ಅಪೀಲನ್ನು ನೊಂದಣಿ ಮಾಡಿಕೊಂಡ ನಂತರ ಈ ಪ್ರಾಧಿಕಾರವು ಉಭಯಪಕ್ಷಕಾರರಿಗೆ ಹಾಜರಾಗುವಂತೆ ತಿಳುವಳಿಕೆ ನೀಡಿರುತ್ತಾರೆ, ಅದರಂತೆ 13.07.2021ರಂದು

ಮೇಲ್ಮನವಿದಾರರರು ಹಾಗೂ ಎದುರುದಾರರು ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ.

5) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರೀಶಿಲನೆಯನ್ನು ಮಾಡಿರುತ್ತೇನೆ.

6) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ:–

   i. ಗ್ರಾಹಕರ ಕುಂದು ಕೊರತೆಗಳ ನಿವಾರಣ ವೇದಿಕೆ, ರಾಯಚೂರು ರವರು ದಿನಾಂಕ 16.03.2021, ಆದೇಶ ಸಂಖ್ಯೆ: ಅಅ/ಉಲೆನಿ/ಹಿಆಸ/20–21/CYS–50, ಪ್ರಕರಣದಲ್ಲಿ ಹೊರಡಿಸಿರುವ ಆದೇಶವು ನಿರಂಕುಶ ಹಾಗೂ ಕಾನೂನು ಬಾಹಿರವಾಗಿರುತ್ತದೆಂದು ಮೇಲ್ಮನವಿದಾರರು ಸಾಬೀತುಪಡಿಸಿರುತ್ತಾರೆಯೇ?

   ii. ಏನು ಆದೇಶ?

7) ಈ ಕೆಳಕಂಡ ಕಾರಣಗಳೀಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

| | |
|---|---|
| ಅಂಶ (i)<br>ಅಂಶ (ii) | ಕಡೆಯ ಆದೇಶದಂತೆ |

## <u>ಕಾರಣಗಳು</u>

8) **<u>ಅಂಶ (ii):</u>** ವಾದವಿವಾದದ ಸಮಯದಲ್ಲಿ ಮೇಲ್ಮನವಿದಾರರ ಪರ ಅವರ ಪ್ರತಿನಿಧಿ ಹಾಜರಾಗಿ ತಮ್ಮ ವಾದವನ್ನು ಮಂಡಿಸುತ್ತಾ ಗ್ರಾಹಕರ ಕುಂದು ಕೊರತೆಗಳ ನಿವಾರಣ ವೇದಿಕೆ, ರಾಯಚೂರು ರವರು ಹೊರಡಿಸಿರುವ ಆದೇಶ Conditions of Supply of Electricity of Distributions Licensees in the State of Karnataka,

Regulation 29.03 ಪ್ರಕಾರ ಇರುವುದಿಲ್ಲವೆಂದು ಎದುರುದಾರರು ಅಂತಿಮ ಆದೇಶವನ್ನು ನೀಡುವ ಮೊದಲು ಅಪೀಲುದಾರರಿಗೆ ತಾತ್ಕಾಲಿಕ ಅಸೆಸ್‌ಮೆಂಟ್ (Assessment) ಆದೇಶದ ನೋಟಿಸ್‌ನ್ನು ನೀಡಬೇಕಾಗಿತ್ತೆಂದು, ಆ ರೀತಿ ನೀಡಿದ್ದರೆ ಮೇಲ್ಮನವಿದಾರರಿಗೆ ತಮ್ಮ ತಕರಾರನ್ನು ಸಲ್ಲಿಸಲು ಅವಕಾಶ ಸಿಗುತ್ತಿತೆಂದು ಆದರೆ ಆ ರೀತಿ ಮಾಡದೆ ಗ್ರಾಹಕರಿಗೆ ಬಿಲ್ಲು ನೀಡಿರುವುದು ಸರಿಯಿಲ್ಲವೆಂದು ಈ ಅಂಶವನ್ನು ವೇದಿಕೆಯ ಮುಂದೆ ಪ್ರಸ್ಥಾಪಿಸಿದ್ದರೂ ಸಹ, ಸದರಿ ವೇದಿಕೆಯು ಈ ಅಂಶವನ್ನು ಪರಿಗಣಿಸಿಲ್ಲವೆಂದು ನುಡಿದಿರುತ್ತಾರೆ. ಮತ್ತೇ ಮುಂದುವರೆದು ರಾಧಾಕೃಷ್ಣ ವರ್ಸಸ್ ಬೆಸ್ಕಾಂ ಪ್ರಕರಣದಲ್ಲಿ ಮಾನ್ಯ ಕರ್ನಾಟಕ ಉಚ್ಛನ್ಯಾಯಾಲಯವು ಈ ಕೆಳಕಂಡಂತೆ ಅವಲೋಕಿಸಿ ತನ್ನ ತೀರ್ಪನ್ನು ನೀಡಿರುತ್ತದೆಂದು,

> ***"In the sense, that there is a misuse or theft of electricity supplied by the company and in the manner of use of the power supplied by the company. Therefore, before a demand of this nature is confirmed in terms of the final assessment order after the provisional assessment order, an opportunity which is contemplated under the statute should necessarily be accorded and if not the order automatically suffers from this defect."***

ಈ ಎಲ್ಲಾ ಕಾರಣಗಳಿಂದ ಗ್ರಾಹಕರಿಗೆ/ಮೇಲ್ಮನವಿದಾರರಿಗೆ ಸಿಗಬೇಕಾಗಿದ್ದ ನೈಸರ್ಗಿಕ ಹಕ್ಕನ್ನು ನೀಡಿದಂತೆ ಆಗಿಲ್ಲವೆಂದು, ಅಷ್ಟೇ ಅಲ್ಲದೆ ಎದುರುದಾರರು ಗ್ರಾಹಕರ ಅಂಗಡಿ ವಿದ್ಯುತ್ ಬಿಲ್ ಮಾಹೆ ಡಿಸೆಂಬರ್ 2019 ನಲ್ಲಿ ರೂ. 1,44,701/- ಪಾವತಿಸುವಂತೆ ಕೋರಿರುವುದು ಅತ್ಯಂತ ಹೆಚ್ಚಾಗಿದೆಯೆಂದು, ಆದ ಕಾರಣ ಇದೆಲ್ಲವನ್ನು ಪರೀಶಿಲಿಸಿ ಪರಿಷ್ಕೃತ ಬಿಲ್ಲನ್ನು ನೀಡುವಂತೆ ಆದೇಶ ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ. ಅಷ್ಟೇ ಅಲ್ಲದೆ ತಾವು 2 ವರ್ಷಗಳಿಂದ ಸೂಮಾರು 20,000/- ರೂಪಾಯಿಗಳಷ್ಟು

ವಿದ್ಯುತ್ ಬಿಲ್ಲನ್ನು ಪಾವತಿ ಮಾಡಿರುತ್ತೇವೆಂದು ಈ ಎಲ್ಲಾ ಕಾರಣಗಳಿಂದ ಈ ಅಪೀಲ್‌ನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ. ಮತ್ತು ತಮ್ಮ ವಾದಕ್ಕೆ ಪೂರಕವಾಗಿ 26.12.2019ರ ಒಂದು ಪತ್ರವನ್ನು ಹಾಗೂ ಹಣ ಪಾವತಿಸಿದ ಬಗ್ಗೆ ವಿದ್ಯುತ್ ಬಿಲ್ ರಸೀದಿಗಳನ್ನು ಹಾಜರುಪಡಿಸಿರುತ್ತರೆ.

9) ಎದುರದಾರರ ಪರ ಎರಡನೇ ಪ್ರತಿವಾದಿ ಹಾಜರಾಗಿದ್ದು ತಮ್ಮ ಲಿಖಿತ ವಾದವನ್ನು ಹಾಜರು ಪಡಿಸಿರುತ್ತಾರೆ ಮತ್ತೆ ಮುಂದುವರೆದು ಅಪೀಲುದಾರರು ಕಾ ಮತ್ತು ಪಾ ನಗರ ಉಪವಿಭಾಗ-1, ಶಾಖೆ 5ರ ಜೆಸ್ಕಾಂ ರಾಯಚೂರು ವ್ಯಾಪ್ತಿಯಲ್ಲಿ ಬರುವ ಆರ್.ಆರ್. ಸಂಖ್ಯೆ 1287 ಜಕಾತಿ ಎಲ್.ಟಿ. 3 ಸಾದಿಕ್ ಜುವೆಲರ್ಸ್, ನೇತಾಜಿ ರೋಡ್ ರಾಯಚೂರು ರವರಿಗೆ ಸಂಬಂಧಿಸಿದ ಬಿಲ್ಲಿನ ವಿವರಗಳ ಬಗ್ಗೆ ತಮ್ಮ ವಾದ ಮಂಡಿಸುತ್ತಾ ತಮ್ಮ ಶಾಖಾಧಿಕಾರಿ 5ರವರು ಕಂದಾಯ ವಸೂಲಾತಿಗೆ ಹೋದ ಸಮಯದಲ್ಲಿ ಸ್ಥಾವರ ಸಂಖ್ಯೆ 1287ರ ಗ್ರಾಹಕರನ್ನು ವಿಚಾರಿಸಿದಾಗ ಸದರೀ ಗ್ರಾಹಕರು ಹಲವಾರು ವರ್ಷಗಳಿಂದ ತಮಗೆ ವಿದ್ಯುತ್ ಬಿಲ್ ವಿತರಿಸಿಲ್ಲವೆಂದು ತಿಳಿಸಿದ ಮೇರೆಗೆ ತಮ್ಮ ಶಾಖಾಧಿಕಾರಿ ಸ್ಥಳ ಪರಿಶಿಲಿಸಿ ದಿನಾಂಕ 18.06.2019ರಂದು ಮಾಪಕದ ವಿವರಗಳೊಂದಿಗೆ ಒಂದು ವರದಿಯನ್ನು ಕೊಟ್ಟಿದ್ದರೆಂದು ಸದರಿ ವರದಿಯ ಪ್ರಕಾರ ಆರ್.ಆರ್. ಸಂಖ್ಯೆ 1287ನ್ನು ಗಣಕ ಯಂತ್ರದಲ್ಲಿ ಪರಿಶೀಲಿಸಿದಾಗ ದಿನಾಂಕ 02.01.2016ರಿಂದ ಸಿಸ್ಟಮ್‌ನಲ್ಲಿ (System) ತಾಂತ್ರಿಕ ದೋಷದಿಂದ ಇನ್‌ಆಕ್ಟೀವ್ (Inactive) ಆಗಿರುವುದು ಕಂಡು ಬಂದಿರುತ್ತದೆಂದು ನಂತರ ಅದನ್ನು ಆಕ್ಟೀವ್ (Active) ಮಾಡಿಸಿ ಗ್ರಾಹಕರಿಗೆ ದಿನಾಂಕ 09.12.2019ರಂದು ಬಿಲ್ ನೀಡಲಾಗಿದೆಯೆಂದು ಅಂದರೆ ದಿನಾಂಕ 02.01.2016ರಿಂದು 09.12.2019ರವರೆಗೆ ಒಟ್ಟು ರೀಂಡಿಗ್ (Reading) 16700 ಆಗಿದ್ದು ಬಿಲ್ಲಿನ ಮೊತ್ತ 1,44,701/-

ರೂಪಾಯಿಗಳು ಆಗಿರುತ್ತದೆಂದು ಇದೇ ಅಲ್ಲದೆ 06.07.2020ರಂದು ಗ್ರಾಹಕರ ಕೋರಿಕೆ ಮೇರೆಗೆ ಪರಿಷ್ಕೃತ ಬಿಲ್ಲನ್ನು ಸಹ ನೀಡಲಾಗಿದೆಯೆಂದು ಅದರ ಪ್ರಕಾರ ರೂ. 1,61,587/– ಆಗಿರುತ್ತದೆಂದು ನೂಡಿದಿರುತ್ತಾರೆ. ಮತ್ತೆ ಮುಂದುವರೆದು ತಾಂತ್ರಿಕ ಸಮಸ್ಯೆ ಬಗೆಹರಿದ ನಂತರ ಸದರಿ ಗ್ರಾಹಕರಿಗೆ ಪ್ರತಿ ತಿಂಗಳು 6ನೇ ತಾರೀಖು ವಿದ್ಯುತ್ ಬಿಲ್ಲನ್ನು ತಲುಪಿಸಲಾಗುತ್ತದೆಂದು ಈಗಾಗಲೇ ನೀಡಿರುವ ತಿಂಗಳವಾರು ವಿದ್ಯುತ್ ಬಾಕಿ ಬಿಲ್ಲು ಹೆಚ್ಚುವರಿ ಆಗಿಲ್ಲವೆಂದು ಗ್ರಾಹಕರ ವಿದ್ಯುತ್ ಬಳಕೆಯ ಯುನಿಟ್‌ನ ಪ್ರಕಾರ ಬಿಲ್ ನೀಡಲಾಗಿದೆಯೆಂದು ನುಡಿದಿರುತ್ತಾರೆ. ಅಷ್ಟೇ ಅಲ್ಲದೆ Conditions of Supply of Electricity of Distributions Licensees in the State of Karnataka, Regulation 4.10 ಪ್ರಕಾರ ಗ್ರಾಹಕರು ತಮ್ಮ ಸ್ಥಾವರಕ್ಕೆ ಬಿಲ್ ನೀಡದೆ ಇದ್ದ ಪಕ್ಷದಲ್ಲಿ 7 ದಿನಗಳ ಒಳಗಾಗಿ ಸ್ಥಳಿಯ ವಿದ್ಯುತ್ ಸರಬರಾಜು ಕಛೇರಿಗೆ ತಿಳಿಸಬೇಕಾಗಿರುತ್ತದೆಂದು ಆದರೆ ಆ ರೀತಿ ಯಾವುದೇ ಮಾಹಿತಿಯನ್ನು ಗ್ರಾಹಕರು ಕೊಟ್ಟಿರುವುದಿಲ್ಲವೆಂದು ಅಷ್ಟೇ ಅಲ್ಲದೇ Conditions of Supply of Electricity of Distributions Licensees in the State of Karnataka, ಕಂಡಿಕೆ 26.01 ಪ್ರಕಾರ ಗ್ರಾಹಕರು ಸೇಲ್ಫ್ ರೀಡಿಂಗ್ (Self Reading) ಪಡೆದು ಅದನ್ನು ಸಂಬಂಧಿತ ಕಛೇರಿಗೆ ತಿಳಿಸಿ ವಿದ್ಯುತ್ ಬಿಲ್ಲನ್ನು ಪಡೆಯಬಹುದಾಗಿತ್ತೆಂದು, ಆದರೆ ಇದನ್ನು ಕೂಡ ಗ್ರಾಹಕರು ಮಾಡಿಲ್ಲವೆಂದು ನುಡಿಯುತ್ತಾ ಅಂತಿಮವಾಗಿ ತಾವು ಯಾವೂದೇ ಹೆಚ್ಚುವರಿ ಬಿಲ್ಲನ್ನು ಕ್ಲೈಮ್ (Claim) ಮಾಡಿಲ್ಲವೆಂದು ಗ್ರಾಹಕರು ಬಳಕೆ ಮಾಡಿದ ಯುನಿಟ್‌ಗಳಿಗೆ ಮಾತ್ರ ವಿದ್ಯುತ್ ಬಿಲ್ ನೀಡಲಾಗಿದೆಯೆಂದು ಈ ಎಲ್ಲಾ ಕಾರಣಗಳಿಂದ ಮೇಲ್ಮನವಿದಾರರ ಪ್ರಾರ್ಥನೆಯನ್ನು ತಿರಸ್ಕರಿಸಿ ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ.

10) ಉಭಯ ಪಕ್ಷಕಾರರು ತಮ್ಮ ಪರ ಮಂಡಿಸಿದ ವಾದವಿವಾದಗಳ ಕಾಲದಲ್ಲಿ ಈ ಪ್ರಾಧಿಕಾರದ ಮುಂದೆ ಒಂದು ಮೆಮೊ ಆಫ್ ಸೆಟಲ್‌ಮೆಂಟ್‌ನ್ನು (Memo of Settlement) ಸಲ್ಲಿಸಿರುತ್ತಾರೆ. ಹಾಗೂ ಈ ಮೆಮೊದಲ್ಲಿ (Memo) ಒಪ್ಪಿಕೊಂಡಂತಹ ಅಂಶಗಳಿಗೆ ಸಂಬಂಧಿಸಿದಂತೆ ಸೂಕ್ತ ಆದೇಶವನ್ನು ಹೊರಡಿಸಲು ಕೋರಿಕೊಂಡಿರುತ್ತಾರೆ. ಸದರಿ ಮೆಮೊದಲ್ಲಿ (Memo) ತೋರಿಸಿಲಾದ ಕಂಡಿಕೆಗಳ ಪ್ರಕಾರ ಎದುರುದಾರರು ತಾವು ಮೇಲ್ಮನವಿದಾರರಿಗೆ ನೀಡಿದ ವಿದ್ಯುತ್ ಬಿಲ್ಲಿನಲ್ಲಿ ತೋರಿಸಲಾದ ಬಡ್ಡಿಯ ಪ್ರಮಾಣದಲ್ಲಿ ಶೇ. 50ರಷ್ಟು ಬಡ್ಡಿಯನ್ನು ಬಿಟ್ಟುಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ ಹಾಗೂ ಮೇಲ್ಮನವಿದಾರರು/ಗ್ರಾಹಕರು ಎದುರುದಾರರಿಗೆ ಆದೇಶದ ದಿನಾಂಕದಿಂದ 4 ತಿಂಗಳ ಮಾಸಿಕ ಸಮಕಂತುಗಳಲ್ಲಿ ಒಟ್ಟು ರೂ. 1,44,701/–ಗಳನ್ನು ಪಾವತಿಸಲು ಒಪ್ಪಿಕೊಂಡಿರುತ್ತಾರೆ.

11) ಈ ಮೇಲ್ಕಂಡ ವಾದವಿವಾದಗಳನ್ನು ಆಲಿಸಿ ಸಂಪೂರ್ಣ ಕಡತವನ್ನು ಪರೀಶಿಲನೆ ಮಾಡಿದಾಗ ಮೇಲ್ಮನವಿದಾರರು ಸಾದಿಕ್ ಜಿವೆಲ್ಲರ್ಸ್‌ನ ಆರ್.ಆರ್ ನಂ. 1287ರ ಗ್ರಾಹಕರಾಗಿರುವುದು ಹಾಗೂ ದಿನಾಂಕ 02.01.2016 ರಿಂದ 09.12.2019 ರವರೆಗೆ ಸಿಸ್ಟಮ್‌ನ (System) ತಾಂತ್ರಿಕ ದೋಷದಿಂದ ಇನ್‌ಆಕ್ಟೀವ್ (Inactive) ಆಗಿದ್ದ ಕಾರಣ ವಿದ್ಯುತ್ ಬಿಲ್ ವಿತರಣೆ ಆಗದೆ ಇರುವುದು ತದನಂತರ ಈ ಅಂಶವನ್ನು ಪರೀಶಿಲಿಸಿದ ಸಂಬಂಧಿತ ಶಾಖಾಧಿಕಾರಿಯವರು ವರದಿಯನ್ನು ನೀಡಿದ ಮೇರೆಗೆ ಜೆಸ್ಕಾಂ ಐಟಿ ಟೀಮ್‌ರವರು (GESCOM IT Team) ಮೇಲ್ಕಂಡ ಆರ್.ಆರ್. ಸಂಖ್ಯೆ ಸ್ಥಾವರವನ್ನು ಪರೀಶಿಲಿಸಿ ಗಣಕ ಯಂತ್ರದಲ್ಲಿ ಆಕ್ಟೀವ್ (Active) ಮಾಡಿಸಿ ಅದರಂತೆ ಗ್ರಾಹಕರು 02.01.2016ರಿಂದ 09.12.2019ರವರೆಗೆ ಬಳಕೆ ಮಾಡಿರುವ ಒಟ್ಟು ರೀಡಿಂಗ್ (Reading) 16700 ಯುನಿಟ್‌ಗಳ ಬಿಲ್ಲನ್ನು ನೀಡಿರುವುದು ಕಂಡು

ಬರುತ್ತದೆ. ಈ ಪ್ರಕರಣದಲ್ಲಿ Conditions of Supply of Electricity of Distributions Licensees in the State of Karnataka, Regulation 26.01ರ ಪ್ರಕಾರ ಗ್ರಾಹಕರಿಗೆ ತಾತ್ಕಾಲಿಕ ಅಸೆಸ್‌ಮೆಂಟ್ ನೋಟಿಸ್‌ನ್ನು ನೀಡಬೇಕಾಗಿದ್ದು ಅದರಂತೆ ಎದುರುದಾರರು ನೀಡಿರುವುದಿಲ್ಲ. ಈ ಅಂಶವನ್ನು ಎದುರುದಾದರು ಸಹ ಅಲ್ಲಗೆಳೆದಿಲ್ಲ. ಆದರೆ ಮೇಲ್ಮನವಿದಾರರು ತಾವು ಸಲ್ಲಿಸಿದ ಜಂಟಿ ಮೆಮೊ ಮೂಲಕ ಈಗಾಗಲೇ ತಾವು ಬಳಸಿಕೊಂಡಿರುವ ವಿದ್ಯುತ್ ಯುನಿಟ್‌ಗಳ ಬಿಲ್ಲು ರೂ. 1,44,701/– ಗಳನ್ನು ಮುಂದಿನ ನಾಲ್ಕು ಮಾಸಿಕ ಸಮ ಕಂತುಗಳಲ್ಲಿ ಎದುರುದಾರ ವಿದ್ಯುತ್ ಸರಬರಾಜು ಕಂಪನಿಗೆ ಪಾವತಿ ಮಾಡುವುದಾಗಿ ಸ್ವತಃ ಒಪ್ಪಿಕೊಂಡಿದ್ದು ಇದಕ್ಕೆ ಎದುರುದಾರರು ಸಹ ಸಮ್ಮತಿ ಸೂಚಿಸಿರುತ್ತಾರೆ. KERC (Consumer Grievance Redressal Forum and Ombudsman) Regulation 2004, Regulation 20.01 ಪ್ರಕಾರ ಈ ಪ್ರಾಧಿಕಾರವು ಉಭಯ ಪಕ್ಷಕಾರರ ನಡುವೇ ಇರುವಂತಹ ವಿವಾದವನ್ನು ಸೆಟಲ್‌ಮೆಂಟ್ (Settlement) ಮೂಲಕ ಇತ್ಯರ್ಥಗೊಳಿಸಬಹುದಾಗಿರುತ್ತದೆ, ಈ ಎಲ್ಲಾ ಕಾರಣಗಳಿಂದ ಮೇಲೆ ಚರ್ಚಿಸಿದ ರೀತಿಯಲ್ಲಿ ಉಬಯಪಕ್ಷಕಾರರು ಕೋರಿರುವಂತೆ ಮೆಮೊ ಆಫ್ ಸೆಟಲ್‌ಮೆಂಟ್‌ನ್ನು (Memo of Settlement) ಪುರಸ್ಕರಿಸಿದರೆ ಯಾವುದೇ ತೊಡಕು ಯಾವುದೇ ಪಕ್ಷಕಾರರಿಗೂ ಉಂಟಾಗುವುದಿಲ್ಲ. ಆದ ಕಾರಣ ಉಭಯಪಕ್ಷಕಾರರು ಮೆಮೊನಲ್ಲಿ ಕಾಣಿಸಲಾದ ಷರತ್ತುಗಳಿಗೆ ಬದ್ಧರಾಗಿರುವಂತೆ ಸೂಚಿಸುತ್ತಾ ಒಂದನೇ ಅಂಶವನ್ನು ಇದೇ ರೀತಿಯಾಗಿ ಉತ್ತರಿಸುತ್ತಿದ್ದೇನೆ.

12. **<u>ಅಂಶ (ii):</u>** ಮೇಲಿನ 1ನೇ ಅಂಶಕ್ಕೆ ಉತ್ತರಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಮಾಡಿರುವ ಆದೇಶ.

**ಸಂಖ್ಯೆ: OMB/G/G-426/2021/D-1565** **ದಿನಾಂಕ : 29.07.2021**

## <u>ಆದೇಶ</u>

1) ಮೇಲ್ಮನವಿದಾರರು ರೂ. 1,44,701/- ಹಣವನ್ನು ದಿನಾಂಕ 13.07.2021 ರಂದು ಸಲ್ಲಿಸಲಾದ ಜಂಟಿ ಸೆಟಲ್‌ಮೆಂಟ್ (Settlement) ಮೆಮೊದಲ್ಲಿ ಒಪ್ಪಕೊಂಡಂತೆ ಇಂದಿನಿಂದ ನಾಲ್ಕು ತಿಂಗಳಲ್ಲಿ ನಾಲ್ಕು ಸಮಕಂತುಗಳಲ್ಲಿ ಎದುರುದಾರ ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ ಎದುರುದಾರ ವಿದ್ಯುತ್ ಸರಬರಾಜು ಕಂಪನಿಯು ಮೇಲ್ಮನವಿದಾರರು ಬಾಕಿ ಉಳಿಸಿಕೊಂಡಂತಹ ಮೊತ್ತದ ವಸೂಲಾತಿಗಾಗಿ ಸೂಕ್ತ ಕಾನೂನು ಕ್ರಮವನ್ನು ಜರುಗಿಸಬಹುದಾಗಿರುತ್ತದೆ.

2) ಇದೇ ಅವಲೋಕನೆಯೊಂದಿಗೆ ಮೇಲ್ಮನವಿಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

3) ದಿನಾಂಕ 13.07.2021ರ ಜಂಟಿ ಸೆಟಲ್‌ಮೆಂಟ್ (Settlement) ಮೆಮೊ ಈ ಆದೇಶದ ಒಂದು ಭಾಗವಾಗಿರುತ್ತದೆ.

ಸಹಿ/-
(ಆರ್. ಶಾರದ)
ವಿದ್ಯುಚ್ಛಕ್ತಿ ಲೋಕಪಾಲರು

ಪ್ರತಿಯನ್ನು:

1) ಶ್ರೀ ಮಹಮ್ಮದ್ ಸಾದಿಕ್,
ಸಾದಿಕ್ ಜುವೆಲರ್ಸ್,
ನೇತಾಜಿ ರೋಡ್,
ರಾಯಚೂರು–584101.

2) ಶ್ರೀ ಎಸ್. ಮಹೆಬೂಬ್,
ಮನೆ ಸಂಖ್ಯೆ: 13–2–2/195,
ಅರ್ಜುನಪ್ಪ ಕಾಲೋನಿ,
ಯೆರೆಮಾರಸ್ ಕ್ಯಾಂಪ್,
ರಾಯಚೂರು–584135.

3) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ–1, ಗುವಿಸಕಂನಿ,
ಡಿಸಿ ರೆಸಿಡೆನ್ಸಿ ಎದುರು ಮತ್ತು ಕೆಇಬಿ ಕಾಲೋನಿ ಎದುರು,
ರಾಯಚೂರು.

4) ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ, ಗುವಿಸಕಂನಿ,
ಬಸವೇಶ್ವರ ವೃತ್ತದ ಹತ್ತಿರ,
ಎಲ್.ಐ.ಸಿ ಕಛೇರಿ ಎದುರು,
ರಾಯಚೂರು–584101.

5) ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
6) ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
7) ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
8) ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.